## ಕರ್ನಾಟಕ ವಿಧಾನ ಪರಿಷತ್ತು

1. **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2403**
2. **ಮಾನ್ಯ ಸದಸ್ಯರ ಹೆಸರು : ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು)**
3. **ಉತ್ತರಿಸಬೇಕಾದ ದಿನಾಂಕ : 22.03.2022**
4. **ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯದಿಂದ ಜಾರಿಯಲ್ಲಿರುವ ಯೋಜನೆಗಳು ಯಾವುವು; (ವಿವರ ನೀಡುವುದು) | ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದಿಂದ "ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಯೋಜನೆ"ಯನ್ನು ಜಾರಿಗೊಳಿಸಲಾಗುತ್ತಿದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ವಾಕೈ 91 ಸಸಕಾ 2015, ದಿನಾಂಕ: 15.09.2016ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಸದರಿ ಸುತ್ತೋಲೆಯನ್ನು **ಅನುಬಂಧ-1 ರಲ್ಲಿ** ಒದಗಿಸಿದೆ.<br>ಕೇಂದ್ರ ಸರ್ಕಾರವು ಸರಕು ಮತ್ತು ಸೇವೆಗಳ ತೆರಿಗೆಯನ್ನು (ಜಿಎಸ್‌ಟಿ) ಜಾರಿಗೊಳಿಸಿದ ನಂತರ ಸಕ್ಕರೆ ಕಾರ್ಖಾನೆಯಿಂದ ರಸ್ತೆಕರವನ್ನು ಸಂಗ್ರಹಿಸುವುದನ್ನು ಸ್ಥಗಿತಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಯೋಜನೆ"ಯಡಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಆಯವ್ಯಯದಲ್ಲಿ ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದೆ. |
| (ಆ) | ಮುಂಬರುವ ವರ್ಷದಲ್ಲಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯದಿಂದ ಜಾರಿ ಮಾಡಲು ಉದ್ದೇಶಿಸಿರುವ ಯೋಜನೆಗಳು ಯಾವುವು? (ವಿವರ ನೀಡುವುದು) | ಪ್ರಸ್ತುತ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದಿಂದ ಯಾವುದೇ ಹೊಸ ಯೋಜನೆಗಳನ್ನು ಜಾರಿ ಮಾಡಲು ಉದ್ದೇಶಿಸಿರುವುದಿಲ್ಲ. |

ಸಂಖ್ಯೆ: ಸಿಐ44 ಎಸ್‌ಜಿಎಫ್ 2022

(ಶಂಕರ.ಬಿ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2403ಕ್ಕೆ ಅನುಬಂಧ**

ಕರ್ನಾಟಕ ಸರ್ಕಾರ

ಸಂಖ್ಯೆ: ವಾಕೈ 91 ಸಸಕಾ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ 15/09/2016

ಸುತ್ತೋಲೆ

ವಿಷಯ:- ಸಕ್ಕರೆ ಕಾರ್ಖಾನೆಗಳಿಂದ ವಸೂಲಾದ ರಸ್ತೆ ಕರ ನಿಧಿಯಿಂದ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಪಡಿಸುವ ಸಂಬಂಧ ಹೊಸ ಮಾರ್ಗಸೂಚಿಗಳನ್ನು ಹೊರಡಿಸುವ ಕುರಿತು.

ಉಲ್ಲೇಖ:-
1) ಸರ್ಕಾರದ ಸುತ್ತೋಲೆ ಸಂಖ್ಯೆ: ಪಿಡಬ್ಲ್ಯುಡಿ 100 ಎಫ್‌ಸಿ-1 2000, ದಿನಾಂಕ 15/7/2000
2) ಸರ್ಕಾರದ ಸುತ್ತೋಲೆ ಸಂಖ್ಯೆ: ಪಿಡಬ್ಲ್ಯುಡಿ 100 ಎಫ್‌ಸಿ-1 2000, ದಿನಾಂಕ 31/1/2001
3) ಸರ್ಕಾರದ ಸುತ್ತೋಲೆ ಸಂಖ್ಯೆ: ಪಿಡಬ್ಲ್ಯುಡಿ 1370 ಎಫ್‌ಸಿ-1 2001, ದಿನಾಂಕ 30/3/2002
4) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರ ಟಿಪ್ಪಣಿ ಸಂಖ್ಯೆ: ಸಸಸ 729 2015, ದಿನಾಂಕ 12/2/2015
5) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: ಡಿಎಸ್‌ಕೆ/ರಕರ/06/2015-16/07, ದಿನಾಂಕ 3/4/2016.

**************

ಸಕ್ಕರೆ ಕಾರ್ಖಾನೆಗಳು ಖರೀದಿಸುವ ಪ್ರತಿ ಮೆ.ಟನ್ ಕಬ್ಬಿಗೆ ರೂ.5/-ರಂತೆ ರಸ್ತೆಕರವನ್ನು ವಾಣಿಜ್ಯ ತೆರಿಗೆ ಇಲಾಖೆಯು ಸಂಗ್ರಹಿಸುತ್ತಿದೆ. ಈ ರೀತಿ ಸಂಗ್ರಹವಾದ ರಸ್ತೆಕರ ಮೊತ್ತದಿಂದ ಆಯಾ ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ರಸ್ತೆಗಳ ದುರಸ್ಥಿ, ಅಭಿವೃದ್ಧಿ ಮತ್ತು ಉನ್ನತೀಕರಣದಂತಹ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅವಕಾಶಗಳಿವೆ. ಈ ಅವಕಾಶಗಳನ್ನು ಮತ್ತು ಕಾರ್ಯಗತಗೊಳಿಸುವ ಜವಾಬ್ದಾರಿಗಳನ್ನು ಉಲ್ಲೇಖ (1) ರಿಂದ (3)ರ ವರೆಗಿನ ಸುತ್ತೋಲೆಗಳಲ್ಲಿ ವಿವರಿಸಲಾಗಿರುತ್ತದೆ. ಈ ಸುತ್ತೋಲೆಗಳ ರೀತ್ಯಾ ಆಯ್ಕೆಯಾದ ರಸ್ತೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದರಿಂದ ಪ್ರಾರಂಭಗೊಂಡು, ಹಣ ಬಿಡುಗಡೆಗೊಳಿಸಿ ಅಂತಿಮವಾಗಿ ಉಪಯುಕ್ತತಾ ದೃಢೀಕರಣ ಪತ್ರಗಳನ್ನು ಸಲ್ಲಿಸುವ ಎಲ್ಲಾ ಜವಾಬ್ದಾರಿಗಳು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದಲ್ಲಿ ಕೇಂದ್ರಿಕೃತವಾಗಿರುವುದು ಕಂಡುಬರುತ್ತದೆ. ಈ ಕಾರಣಗಳಿಂದಾಗಿ ಆಯ್ಕೆಯಾದ ರಸ್ತೆ ಕಾಮಗಾರಿಗಳಿಗೆ ಸಕಾಲದಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆಯದೆ, ಕಾಮಗಾರಿಗಳು ಸಂಬಂಧಿಸಿದ ಆರ್ಥಿಕ ವರ್ಷದಲ್ಲಿಯೇ ಪೂರ್ಣಗೊಳ್ಳದಿರುವುದನ್ನು ಗಮನಿಸಲಾಗಿದೆ. ಅಲ್ಲದೆ, ಆಯ-ವ್ಯಯದಲ್ಲಿ ಆಯಾ ವರ್ಷದಲ್ಲಿ ನೀಡಲಾಗುತ್ತಿರುವ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಲಾಗದೆ ಸಕ್ಕರೆ ನಿರ್ದೇಶನಾಲಯವು ಅನುದಾನವನ್ನು ಸರ್ಕಾರಕ್ಕೆ ಅಧ್ಯರ್ಪಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಸಕ್ಕರೆ ನಿರ್ದೇಶನಾಲಯದಲ್ಲಿ ಇರುವ ಸಿಬ್ಬಂದಿಗಳ ಕೊರತೆ ಹಾಗೂ ಸಕ್ಕರೆ ನಿರ್ದೇಶನಾಲಯದಲ್ಲಿಯೇ ಎಲ್ಲಾ ಅಧಿಕಾರಗಳು ಮತ್ತು ಜವಾಬ್ದಾರಿಗಳು ಕೇಂದ್ರಿಕೃತವಾಗಿರುವುದನ್ನು ಸರ್ಕಾರ ಗಮನಿಸಿದೆ. 2016-17ನೇ ಸಾಲಿಗೆ ರೂ.50.00 ಕೋಟಿಗಳ ಅನುದಾನ ಒದಗಿಸಿದ್ದು, ಇದರ ಸಮರ್ಪಕ ಬಳಕೆಯಾಗುವಂತೆ ಕ್ರಮವಿಡುವುದು ಅಗತ್ಯವಿರುತ್ತದೆ. ಈ ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ರಸ್ತೆಕರ

ನಿಧಿಯಿಂದ ನಿರ್ವಹಿಸಲಾಗುತ್ತಿರುವ ರಸ್ತೆಗಳ ಅಭಿವೃದ್ಧಿ ಕಾಮಗಾರಿಯ ಸಂಬಂಧ ಈ ಹಿಂದೆ ಉಲ್ಲೇಖ (1) ರಿಂದ (3)ರ ವರೆಗೆ ಹೊರಡಿಸಿರುವ ಸುತ್ತೋಲೆಗಳನ್ನು ಹಿಂದಕ್ಕೆ ಪಡೆದು ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವುದು ಅಗತ್ಯವಾಗಿದೆ ಎಂದು ತೀರ್ಮಾನಿಸಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಿದೆ.

1. ರಸ್ತೆ ಕರವನ್ನು ವಾಣಿಜ್ಯ ತೆರಿಗೆ ಇಲಾಖೆಯು ಪ್ರತಿ ಮೆ.ಟನ್ ಕಬ್ಬಿಗೆ ನಿಗದಿತ (ಪ್ರಸ್ತುತ ದರ ರೂ.5/- ಆಗಿರುತ್ತದೆ) ದರದಲ್ಲಿ ಸಂಗ್ರಹಿಸಬೇಕು. ರಸ್ತೆ ಕರ ಸಂಗ್ರಹದ ನಿರ್ವಹಣೆಗಾಗಿ ಒಂದು ಪ್ರತ್ಯೇಕ ಲೆಕ್ಕ ಶೀರ್ಷಿಕೆಯನ್ನು ನಿರ್ವಹಿಸತಕ್ಕದ್ದು. ಸಂಗ್ರಹವಾದ ಮೊತ್ತವನ್ನು 0040-00-102-0-07 (ಕಬ್ಬು ಖರೀದಿ ಕರ) ಲೆಕ್ಕ ಶೀರ್ಷಿಕೆಗೆ ಜಮಾ ಮಾಡತಕ್ಕದ್ದು.

2. ರಸ್ತೆ ಕರದಡಿಯಲ್ಲಿ ಸಂಗ್ರಹವಾದ ಮೊತ್ತದ ಜಿಲ್ಲಾವಾರು ಹಾಗೂ ಸಕ್ಕರೆ ಕಾರ್ಖಾನೆವಾರು ಮಾಹಿತಿಯನ್ನು ಪ್ರತಿ ಆರು ತಿಂಗಳಿಗೊಮ್ಮೆ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆಯವರು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ನೀಡತಕ್ಕದ್ದು.

3. ಸಂಬಂಧಿಸಿದ ಆರ್ಥಿಕ ವರ್ಷದಲ್ಲಿ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ಅನುದಾನವನ್ನು ಕಾರ್ಖಾನೆಗಳು ಆಯವ್ಯಯ ವರ್ಷದ ಹಿಂದಿನ ಎರಡು ವರ್ಷಗಳ ಹಿಂದೆ ಪಾವತಿ ಮಾಡಿರುವ ರಸ್ತೆ ಕರದ ಪ್ರಮಾಣವನ್ನಾಧರಿಸಿ ಲೆಕ್ಕ ಶೀರ್ಷಿಕೆ "4860-04-004-0-01 ಸಕ್ಕರೆ ಕಾರ್ಖಾನೆ ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿ ಅಡಿ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಒದಗಿಸಬೇಕಾಗುವುದು.

4. ಆಯವ್ಯಯ ವರ್ಷದಲ್ಲಿ ಅನುದಾನ ಮಂಜೂರಾದ ಕೂಡಲೇ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ವಾಣಿಜ್ಯ ತೆರಿಗೆ ಇಲಾಖೆಯ ಮಾಹಿತಿಯನ್ನಾಧರಿಸಿ ಜಿಲ್ಲಾವಾರು ಅನುದಾನವನ್ನು ಹಂಚಿಕೆ ಮಾಡಿ ಜಿಲ್ಲಾಧಿಕಾರಿಗಳಿಗೆ ಆದೇಶ ಹೊರಡಿಸುವುದು.

5. <u>ಜಿಲ್ಲಾ ಸಮಿತಿ:</u>

ರಸ್ತೆಕರದ ನಿಧಿಯಿಂದ ಕೈಗೆತ್ತಿಕೊಳ್ಳಲಾಗುವ ರಸ್ತೆ ಕಾಮಗಾರಿಗಳ ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ನಿರ್ವಹಣೆಗೆ ಅನುಕೂಲವಾಗುವಂತೆ ಈ ಕೆಳಕಂಡಂತೆ ಜಿಲ್ಲಾ ಸಮಿತಿಯು ಇರತಕ್ಕದ್ದು.

| | | | |
|---|---|---|---|
| 1. | ಜಿಲ್ಲಾಧಿಕಾರಿಗಳು | ----- | ಅಧ್ಯಕ್ಷರು |
| 2. | ಕಾರ್ಖಾನೆ ವ್ಯಾಪ್ತಿಯ ವಿಧಾನ ಸಭಾ/ ವಿಧಾನ ಪರಿಷತ್ತಿನ ಸದಸ್ಯರು | ----- | ಸದಸ್ಯರು |
| 3. | ಜಿಲ್ಲಾ ವ್ಯಾಪ್ತಿಯ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು | ----- | ಸದಸ್ಯರು |
| 4. | ಜಿಲ್ಲಾ ವ್ಯಾಪ್ತಿಯ ಜಲ ಸಂಪನ್ಮೂಲ ಇಲಾಖೆಯ ಕಾರ್ಯಪಾಲಕ ಅಭಿಯಂತರರು | ----- | ಸದಸ್ಯರು |
| 5. | ಸಂಬಂಧಿಸಿದ ಸಕ್ಕರೆ ಕಾರ್ಖಾನೆಯ ಪ್ರತಿನಿಧಿಗಳು | ----- | ಸದಸ್ಯರು |
| 6. | ಜಿಲ್ಲಾ ವ್ಯಾಪ್ತಿಯ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು | ----- | ಸದಸ್ಯ ಕಾರ್ಯದರ್ಶಿ |

6. <u>ಕ್ರಿಯಾ ಯೋಜನೆ ತಯಾರಿಸುವುದು:</u>

ಎ. ರಸ್ತೆ ಕರ ಪಾವತಿಸಿರುವ ಕಾರ್ಖಾನೆಗಳು / ಸ್ಥಳೀಯ ಜನಪ್ರತಿನಿಧಿಗಳು, ಸಂಬಂಧಿಸಿದ ಆರ್ಥಿಕ ವರ್ಷದಲ್ಲಿ ಯಾವ ರಸ್ತೆಯನ್ನು ದುರಸ್ಥಿಗೊಳಿಸಬೇಕು ಅಥವಾ ಅಭಿವೃದ್ಧಿ ಪಡಿಸಬೇಕು ಅಥವಾ ಹೊಸದಾಗಿ ನಿರ್ಮಿಸಬೇಕು ಎಂಬುದನ್ನು ಗುರುತಿಸಿ ಜಿಲ್ಲಾ ಸಮಿತಿಗೆ ಕೋರಿಕೆ ಸಲ್ಲಿಸಬೇಕು.

ಬಿ. ಕಾರ್ಖಾನೆಯಿಂದ ಪ್ರಾಪ್ತವಾದ ಕೋರಿಕೆಯನ್ನು ಜಿಲ್ಲಾಧಿಕಾರಿಗಳು ಲಭ್ಯವಾಗಲಿರುವ ಅನುದಾನದೊಡನೆ ಪರಿಶೀಲಿಸಿ ಜಿಲ್ಲಾ ಸಮಿತಿಯ ಸಭೆ ಕರೆದು ತೀರ್ಮಾನಕ್ಕಾಗಿ ಮಂಡಿಸುವುದು.

ಸಿ. ಜಿಲ್ಲಾ ಸಮಿತಿಯು ಪ್ರಸ್ತಾವನೆಯ ಸಂಬಂಧ ಸಮಗ್ರವಾಗಿ ಚರ್ಚಿಸಿ, ಆಯ್ಕೆಯಾಗ ಬೇಕಿರುವ ರಸ್ತೆಯ ಅಗತ್ಯತೆಯನ್ನು ಪರಿಶೀಲಿಸಿ ಪ್ರಸ್ತಾವನೆಗೆ ಅನುಮೋದನೆ ನೀಡುವುದು.

ಡಿ. ಜಿಲ್ಲಾ ಸಮಿತಿಯಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವುದರ ಜೊತೆಗೆ ಸಂಬಂಧಿಸಿದ ರಸ್ತೆ ಕಾಮಗಾರಿಗಳನ್ನು ಯಾರು ನಿರ್ವಹಿಸಬೇಕು ಅಂದರೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಅಥವಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಅಥವಾ ಜಲಸಂಪನ್ಮೂಲ ಇಲಾಖೆ ಇಂಜಿನಿಯರಿಂಗ್ ವಿಭಾಗ ಎಂಬುದನ್ನು ನಿರ್ಣಯಿಸಿ ನಿರ್ವಹಣಾ ಪ್ರಾಧಿಕಾರ (Implementing Agency) ವನ್ನು ಗುರುತಿಸುವುದು. ಈ ರೀತಿ ಗುರುತಿಸಲಾದ ಪ್ರಾಧಿಕಾರಕ್ಕೆ ಸಂಬಂಧಿಸಿದ ರಸ್ತೆಗೆ ತಗಲಬಹುದಾದ ವೆಚ್ಚಗಳ ಅಂದಾಜು ಪಟ್ಟಿ ತಯಾರಿಸಲು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡುವುದು.

ಇ. ಜಿಲ್ಲಾ ಸಮಿತಿಯು ಅನುಮೋದಿಸಿದ ರಸ್ತೆ ಕಾಮಗಾರಿಗಳನ್ನು ಕಾರಣಾಂತರಗಳಿಂದ ಬದಲಾಯಿಸುವ ಸಂದರ್ಭ ಬಂದಲ್ಲಿ ಅಂತಹ ಪ್ರಸ್ತಾವನೆಯನ್ನು ಜಿಲ್ಲಾ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳುವುದು.

7. <u>ಅಂದಾಜು ಪಟ್ಟಿ ತಯಾರಿಸುವುದು:</u>

ಎ. ಜಿಲ್ಲಾಧಿಕಾರಿಗಳ ಸೂಚನೆ ಬಂದ ಕೂಡಲೇ ಸಂಬಂಧಿಸಿದ ರಸ್ತೆಯ ನಿರ್ವಹಣೆಗೆ ಗುರ್ತಿಸಲಾದ ಪ್ರಾಧಿಕಾರವು (Implementing Agency) ಆ ರಸ್ತೆಯ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸುವುದು.

ಬಿ. ಅಂದಾಜು ಪಟ್ಟಿಯನ್ನು ಚಾಲ್ತಿಯಲ್ಲಿರುವ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ಕಾಲ-ಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ದರಗಳನ್ನಾಧರಿಸಿ (ಎಸ್.ಆರ್) ಮತ್ತು ಮಾರ್ಗಸೂಚಿಗಳಂತೆ ತಯಾರಿಸುವುದು.

ಸಿ. ಈ ರೀತಿ ತಯಾರಿಸಲಾದ ಅಂದಾಜು ಪಟ್ಟಿಗೆ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಮಾರ್ಗಸೂಚಿಗಳನ್ವಯ ತಾಂತ್ರಿಕ ಅನುಮೋದನೆಯನ್ನು ನಿರ್ವಹಣಾ ಪ್ರಾಧಿಕಾರವು ಪಡೆದುಕೊಳ್ಳುವುದು.

ಡಿ. ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ ಪಡೆದುಕೊಂಡ ನಂತರ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ ಜಿಲ್ಲಾಧಿಕಾರಿಗಳಿಗೆ ನಿರ್ವಹಣಾ ಪ್ರಾಧಿಕಾರವು ಪ್ರಸ್ತಾವನೆಯನ್ನು ಸಲ್ಲಿಸುವುದು.

ಇ. ಪ್ರಾಪ್ತವಾದ ಅಂದಾಜು ಪಟ್ಟಿ ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆಯನ್ನು ಸೂಕ್ತ ಷರತ್ತುಗಳೊಡನೆ ನೀಡುವುದು. ಜಿಲ್ಲಾಧಿಕಾರಿಗಳು ನಗರ ಸ್ಥಳೀಯ ಸಂಸ್ಥೆಗಳ ಕಾಮಗಾರಿಗಳಿಗೆ ಆಡಳಿತ ಅನುಮೋದನೆ ನೀಡುವ ಆರ್ಥಿಕ ಪ್ರತ್ಯೋಜನೆಯ ಮಿತಿಯಲ್ಲಿ ಕಾಮಗಾರಿಗಳನ್ನು ಅನುಮೋದಿಸಲು ಅಧಿಕಾರ ಹೊಂದಿರುತ್ತಾರೆ.

<u>ಷರತ್ತುಗಳು:</u>

i. ಈ ರಸ್ತೆ ಕಾಮಗಾರಿಯನ್ನು ಈ ಆಡಳಿತಾತ್ಮಕ ಅನುಮೋದನೆ ಹೊರಡಿಸಿದ ಆರು ತಿಂಗಳೊಳಗೆ ಪೂರ್ಣಗೊಳಿಸುವುದು.

ii. ಈ ರಸ್ತೆ ಕಾಮಗಾರಿಯನ್ನು ಬೇರೆ ಇನ್ನಾವುದೇ ಯೋಜನೆಗಳಡಿಯಲ್ಲಿ ಕೈಗೆತ್ತಿಕೊಳ್ಳಕೂಡದು.

iii. ಅನುಮೋದಿತ ಅಂದಾಜು ಪಟ್ಟಿಯ ಮೊತ್ತಕ್ಕೆ ಅನುಗುಣವಾಗಿಯೇ ಕಾಮಗಾರಿಯನ್ನು ಪೂರ್ಣಗೊಳಿಸುವುದು.

iv. ಅಂದಾಜು ಪಟ್ಟಿಯ ಮೊತ್ತಕ್ಕಿಂತಲೂ ಕಾಮಗಾರಿಯ ವೆಚ್ಚ ಹೆಚ್ಚಾಗುವ ಸಂದರ್ಭಗಳಲ್ಲಿ ಸಕಾರಣಗಳೊಡನೆ ಸೂಕ್ತ ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಪರಿಷ್ಕೃತ ಅಂದಾಜು ಪಟ್ಟಿಗೆ ಅನುಮೋದನೆ ಪಡೆದುಕೊಳ್ಳತಕ್ಕದ್ದು.

v. ಕಾಮಗಾರಿಯ ಪೂರ್ಣ ನಿರ್ವಹಣೆಯನ್ನು ಕರ್ನಾಟಕ ಪಾರದರ್ಶಕ ಕಾಯ್ದೆ 1999 ಅವಕಾಶಗಳಂತೆ ನಿರ್ವಹಿಸತಕ್ಕದ್ದು.

vi. ಸಂಬಂಧಿಸಿದ ರಸ್ತೆ ಕಾಮಗಾರಿಯ ಗುಣಮಟ್ಟ ಮತ್ತು ನಿರ್ವಹಣೆಯು, ನಿರ್ವಹಣಾ ಪ್ರಾಧಿಕಾರದ ಜವಾಬ್ದಾರಿಯಾಗಿರುತ್ತದೆ.

8. <u>ಹಣ ಬಿಡುಗಡೆ ಪ್ರಕ್ರಿಯೆ:</u>

ಎ. ಸಂಬಂಧಿಸಿದ ರಸ್ತೆ ಕಾಮಗಾರಿಯು ಪೂರ್ಣಗೊಂಡ ಕೂಡಲೇ ನಿರ್ವಹಣಾ ಪ್ರಾಧಿಕಾರವು ಕಾಮಗಾರಿ ಪೂರ್ಣಗೊಂಡ ಬಗ್ಗೆ ಸೂಕ್ತ ನಮೂನೆಗಳಲ್ಲಿ (ಲೋಕೋಪಯೋಗಿ ಇಲಾಖೆ ನಿಗದಿಗೊಳಿಸಿದ ನಮೂನೆಗಳು) ದೃಢೀಕರಣ ಸಲ್ಲಿಸುವುದರ ಮೂಲಕ ಹಣ ಬಿಡುಗಡೆಗೆ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವುದು. ಜಿಲ್ಲಾಧಿಕಾಲಿಗಳಿಗೆ ಸಲ್ಲಿಸುವ ಹಣ ಬಿಡುಗಡೆ ಪ್ರಸ್ತಾವನೆಯನ್ನು ಈ ಕೆಳಕಂಡ ದೃಢೀಕರಣಗಳೊಡನೆ ಸಲ್ಲಿತಕ್ಕದ್ದು.

i. ಕಾಮಗಾರಿಯು ಪೂರ್ಣಗೊಂಡಿರುವುದಕ್ಕೆ ದೃಢೀಕರಣ ಪತ್ರ (ನಮೂನೆ PWG 46 ಮತ್ತು PWG 47)

ii. ಎಂ.ಬಿ. ಯ (Measurement Book) ದೃಢೀಕೃತ ಪ್ರತಿ.

iii. ಸಂಬಂಧಿಸಿದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವ ಪ್ರತಿ.

iv. ಕ್ರಿಯಾ ಯೋಜನೆ ಅನುಮೋದಿಸಿರುವ ಜಿಲ್ಲಾ ಸಮಿತಿಯ ಸಭಾ ನಡವಳಿಕೆ ಪ್ರತಿ.

ಈ ದಾಖಲೆಗಳನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಿರ್ವಹಿಸುವುದು.

ಬಿ. ಈ ರೀತಿ ಪ್ರಾಪ್ತವಾದ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡುರುವ ಪ್ರಸ್ತಾವನೆಯೊಡನೆ ಪರಿಶೀಲಿಸಿ ಜಿಲ್ಲಾಧಿಕಾರಿಗಳು ಹಣ ಬಿಡುಗಡೆಗೆ ಕೋರಿಕೆಯನ್ನು ಕಾಮಗಾರಿವಾರು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸಲ್ಲಿಸುವುದು.

ಸಿ. ಜಿಲ್ಲಾಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಅಗತ್ಯವಿರುವ ಅನುದಾನದ ಪ್ರಸ್ತಾವನೆಯನ್ನು ಕಾಮಗಾರಿವಾರು ಅಂದರೆ ಹಿಂದಿನ ಬಾಕಿ ಹಾಗೂ ಪ್ರಸಕ್ತ ತ್ರೈಮಾಸಿಕದ ಅಗತ್ಯತೆಯನ್ನು ಕ್ರೋಢೀಕರಿಸಿ ಅನುದಾನ ಬಿಡುಗಡೆಗೆ ಕೋರಿಕೆ ಸಲ್ಲಿಸುವುದು.

ಡಿ. ಜಿಲ್ಲಾಧಿಕಾರಿಗಳಿಂದ ಹಣ ಬಿಡುಗಡೆಗೆ ಪ್ರಾಪ್ತವಾದ ಪ್ರಸ್ತಾವನೆಯನ್ನು ಪರಿಶೀಲಿಸಿ ಆ ಜಿಲ್ಲೆಗೆ ಹಂಚಿಕೆಯಾಗಿರುವ ವಾರ್ಷಿಕ ಅನುದಾನವನ್ನು ಮತ್ತು ಸರ್ಕಾರವು ತ್ರೈಮಾಸಿಕದಲ್ಲಿ ಬಿಡುಗಡೆಗೊಳಿಸಿರುವ ಅನುದಾನವನ್ನು ಆಧರಿಸಿ ಪ್ರತಿ ತ್ರೈಮಾಸಿಕಕ್ಕೆ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬಿಡುಗಡೆಗೊಳಿಸುವುದು.

ಇ. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬಿಡುಗಡೆಗೊಳಿಸಿದ ಅನುದಾನವನ್ನು ಜಿಲ್ಲಾಧಿಕಾರಿಗಳು ಅನುಷ್ಠಾನ ಪ್ರಾಧಿಕಾರಕ್ಕೆ (Implementing Agency) ಬಿಡುಗಡೆಗೊಳಿಸುವುದು. ಈ ರೀತಿ ಬಿಡುಗಡೆಯಾದ ಅನುದಾನವನ್ನು ನಿರ್ವಹಣಾ ಪ್ರಾಧಿಕಾರವು ವೆಚ್ಚ ಮಾಡಿದ ಕೂಡಲೇ ಕಾಮಗಾರಿವಾರು ಉಪಯುಕ್ತತಾ ಪ್ರಮಾಣ ಪತ್ರವನ್ನು (U.C) ನಿಗದಿತ ನಮೂನೆಯಲ್ಲಿ ತ್ರಿಪ್ರತಿಗಳಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸಲ್ಲಿಸುವುದು.

ಎಫ್. ಜಿಲ್ಲಾಧಿಕಾರಿಗಳಿಂದ ಪ್ರಾಪ್ತವಾದ ಉಪಯುಕ್ತತಾ ಪ್ರಮಾಣ ಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸುವ ಜವಾಬ್ದಾರಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರದ್ದಾಗಿರುತ್ತದೆ.

ಜಿ. ಆಯವ್ಯಯದಲ್ಲಿ ಒದಗಿಸಲಾದ ಅನುದಾನದಂತೆ ಸರ್ಕಾರವು ಕಾಲಕಾಲಕ್ಕೆ ಬಿಡುಗಡೆ ಮಾಡುವ ಮೊತ್ತವನ್ನು ಜಿಲ್ಲಾಧಿಕಾರಿಗಳು ಸಮರ್ಪಕವಾಗಿ ಉಪಯೋಗಿಸಿಕೊಂಡಿರುವ ಬಗ್ಗೆ ಆಡಳಿತಾತ್ಮಕ ಮೇಲುಸ್ತುವಾರಿ ನಿರ್ವಹಿಸುವ ಜವಾಬ್ದಾರಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರದ್ದಾಗಿರುತ್ತದೆ.

9. ರಸ್ತೆ ಕರ ನಿಧಿ ಅಡಿಯಲ್ಲಿ ಕೈಗೆತ್ತಿಕೊಳ್ಳುವ ಕಾಮಗಾರಿಗಳ ಸಂಬಂಧ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾರ್ಖಾನೆವಾರು ಪ್ರತ್ಯೇಕ ಲೆಕ್ಕ ಪುಸ್ತಕಗಳನ್ನು ನಿರ್ವಹಿಸತಕ್ಕದ್ದು. ಮಹಾಲೇಖಪಾಲರು ವಾರ್ಷಿಕವಾಗಿ ನಡೆಸುವ ಪರಿವೀಕ್ಷಣೆ ಮತ್ತು ಲೆಕ್ಕಪರಿಶೋಧನೆಗೆ ಜಿಲ್ಲಾಧಿಕಾರಿಗಳು ಪೂರ್ಣ ಮಾಹಿತಿ ಒದಗಿಸತಕ್ಕದ್ದು. ಕಾಲ-ಕಾಲಕ್ಕೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಹಾಗು ಹೊರಡಿಸಲಾಗುವ ಆದೇಶಗಳ ಬಗ್ಗೆ ಸಕ್ಕರೆ ನಿರ್ದೇಶನಾಲಯಕ್ಕೆ ಕಡ್ಡಾಯವಾಗಿ ಮಾಹಿತಿ ನೀಡತಕ್ಕದ್ದು.

ಬಿ. ಈ ರೀತಿ ಪ್ರಾಪ್ತವಾದ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡುರುವ ಪ್ರಸ್ತಾವನೆಯೊಡನೆ ಪರಿಶೀಲಿಸಿ ಜಿಲ್ಲಾಧಿಕಾರಿಗಳು ಹಣ ಬಿಡುಗಡೆಗೆ ಕೋರಿಕೆಯನ್ನು ಕಾಮಗಾರಿವಾರು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸಲ್ಲಿಸುವುದು.

ಸಿ. ಜಿಲ್ಲಾಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಅಗತ್ಯವಿರುವ ಅನುದಾನದ ಪ್ರಸ್ತಾವನೆಯನ್ನು ಕಾಮಗಾರಿವಾರು ಅಂದರೆ ಹಿಂದಿನ ಬಾಕಿ ಹಾಗೂ ಪ್ರಸಕ್ತ ತ್ರೈಮಾಸಿಕದ ಅಗತ್ಯತೆಯನ್ನು ಕ್ರೋಢೀಕರಿಸಿ ಅನುದಾನ ಬಿಡುಗಡೆಗೆ ಕೋರಿಕೆ ಸಲ್ಲಿಸುವುದು.

ಡಿ. ಜಿಲ್ಲಾಧಿಕಾರಿಗಳಿಂದ ಹಣ ಬಿಡುಗಡೆಗೆ ಪ್ರಾಪ್ತವಾದ ಪ್ರಸ್ತಾವನೆಯನ್ನು ಪರಿಶೀಲಿಸಿ ಆ ಜಿಲ್ಲೆಗೆ ಹಂಚಿಕೆಯಾಗಿರುವ ವಾರ್ಷಿಕ ಅನುದಾನವನ್ನು ಮತ್ತು ಸರ್ಕಾರವು ತ್ರೈಮಾಸಿಕದಲ್ಲಿ ಬಿಡುಗಡೆಗೊಳಿಸಿರುವ ಅನುದಾನವನ್ನು ಆಧರಿಸಿ ಪ್ರತಿ ತ್ರೈಮಾಸಿಕಕ್ಕೆ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬಿಡುಗಡೆಗೊಳಿಸುವುದು.

ಇ. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬಿಡುಗಡೆಗೊಳಿಸಿದ ಅನುದಾನವನ್ನು ಜಿಲ್ಲಾಧಿಕಾರಿಗಳು ಅನುಷ್ಠಾನ ಪ್ರಾಧಿಕಾರಕ್ಕೆ (Implementing Agency) ಬಿಡುಗಡೆಗೊಳಿಸುವುದು. ಈ ರೀತಿ ಬಿಡುಗಡೆಯಾದ ಅನುದಾನವನ್ನು ನಿರ್ವಹಣಾ ಪ್ರಾಧಿಕಾರವು ವೆಚ್ಚ ಮಾಡಿದ ಕೂಡಲೇ ಕಾಮಗಾರಿವಾರು ಉಪಯುಕ್ತತಾ ಪ್ರಮಾಣ ಪತ್ರವನ್ನು (U.C) ನಿಗದಿತ ನಮೂನೆಯಲ್ಲಿ ತ್ರಿಪ್ರತಿಗಳಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸಲ್ಲಿಸುವುದು.

ಎಫ್. ಜಿಲ್ಲಾಧಿಕಾರಿಗಳಿಂದ ಪ್ರಾಪ್ತವಾದ ಉಪಯುಕ್ತತಾ ಪ್ರಮಾಣ ಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸುವ ಜವಾಬ್ದಾರಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರದ್ದಾಗಿರುತ್ತದೆ.

ಜಿ. ಆಯವ್ಯಯದಲ್ಲಿ ಒದಗಿಸಲಾದ ಅನುದಾನದಂತೆ ಸರ್ಕಾರವು ಕಾಲಕಾಲಕ್ಕೆ ಬಿಡುಗಡೆ ಮಾಡುವ ಮೊತ್ತವನ್ನು ಜಿಲ್ಲಾಧಿಕಾರಿಗಳು ಸಮರ್ಪಕವಾಗಿ ಉಪಯೋಗಿಸಿಕೊಂಡಿರುವ ಬಗ್ಗೆ ಆಡಳಿತಾತ್ಮಕ ಮೇಲುಸ್ತುವಾರಿ ನಿರ್ವಹಿಸುವ ಜವಾಬ್ದಾರಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರದ್ದಾಗಿರುತ್ತದೆ.

9. ರಸ್ತೆ ಕರ ನಿಧಿ ಅಡಿಯಲ್ಲಿ ಕೈಗೆತ್ತಿಕೊಳ್ಳುವ ಕಾಮಗಾರಿಗಳ ಸಂಬಂಧ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾರ್ಯಾನೆವಾರು ಪ್ರತ್ಯೇಕ ಲೆಕ್ಕ ಪುಸ್ತಕಗಳನ್ನು ನಿರ್ವಹಿಸತಕ್ಕದ್ದು. ಮಹಾಲೇಖಪಾಲರು ವಾರ್ಷಿಕವಾಗಿ ನಡೆಸುವ ಪರಿವೀಕ್ಷಣೆ ಮತ್ತು ಲೆಕ್ಕಪರಿಶೋಧನೆಗೆ ಜಿಲ್ಲಾಧಿಕಾರಿಗಳು ಪೂರ್ಣ ಮಾಹಿತಿ ಒದಗಿಸತಕ್ಕದ್ದು. ಕಾಲ-ಕಾಲಕ್ಕೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಹಾಗು ಹೊರಡಿಸಲಾಗುವ ಆದೇಶಗಳ ಬಗ್ಗೆ ಸಕ್ಕರೆ ನಿರ್ದೇಶನಾಲಯಕ್ಕೆ ಕಡ್ಡಾಯವಾಗಿ ಮಾಹಿತಿ ನೀಡತಕ್ಕದ್ದು.

10. ಈ ಹಿಂದೆ ಹೊರಡಿಸಲಾಗಿದ್ದ ಉಲ್ಲೇಖ (1) ರಿಂದ (3)ರವರೆಗಿನ ಎಲ್ಲಾ ಮಾರ್ಗಸೂಚಿ/ಸುತ್ತೋಲೆಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ತಮ್ಮ ನಂಬುಗೆಯ,

(ಅಶೋಕ ಡಿ.ಬಾಗೋಜಿಕೊಪ್ಪ),
ಸರ್ಕಾರದ ಅಧೀನ ಕಾರ್ಯದರ್ಶಿ (ಸಕ್ಕರೆ),
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.

ಇವರಿಗೆ,

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001
2) ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001
3) ಪ್ರಧಾನ ಮಹಾಲೇಖಪಾಲರು (ಎ. & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
9) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಕೆಹೆಚ್‌ಬಿ ಕಟ್ಟಡ, ಸಿಬಿಐಬಿ ಕಾಂಪ್ಲೆಕ್ಸ್, ಎಫ್ ಬ್ಲಾಕ್, 5ನೇ ಮಹಡಿ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು-560009.
11) ಕಾರ್ಖಾನೆ ವ್ಯಾಪ್ತಿಯ ಎಲ್ಲಾ ವಿಧಾನ ಸಭಾ/ವಿಧಾನ ಪರಿಷತ್ತು ಸದಸ್ಯರುಗಳಿಗೆ – ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಇವರ ಮುಖಾಂತರ.
12) ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, 6ನೇ ಮಹಡಿ, ಮಲೆಮಹದೇಶ್ವರ ಟ್ರಸ್ಟ್ ಕಟ್ಟಡ, ಚಾಮರಾಜಪೇಟೆ, ಬೆಂಗಳೂರು-560018.
13) ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ(ಸಂಪರ್ಕ-1), ವಿಕಾಸ ಸೌಧ, ಬೆಂಗಳೂರು.
14) ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ).
15) ಸಂಬಂಧಪಟ್ಟ ಎಲ್ಲಾ ಸಕ್ಕರೆ ಕಾರ್ಖಾನೆಗಳು-ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರ ಮುಖಾಂತರ.